ಕಿರಾರ್‌ಬೋಗಿ, ಹೊನ್ನೆ, ಬೀಟೆ, ಕರಡಿ, ಬರ್ಮಾ, ಬಿದಿರು, ಕಾಡುಗೇರು, ಒಂಟಿಬೆತ್ತ, ಮತ್ತಿ, ತಾರಿ, ಹಾಲುಮಡ್ಡಿ ಮತ್ತು ನೊಗ

ಇದಕ್ಕಾಗಿ ಮೀಸಲಿಟ್ಟ ಹಣ ರೂ. 33.99 ಲಕ್ಷ

ಸೋಮವಾರಪೇಟೆ ತಾಲ್ಲೂಕು : ಮಹಾಗನಿ, ನೆರಳೆ, ಹೊನ್ನೆ, ನಂದಿ, ಮಾವು, ತಾರಿ, ಸಂಪಿಗೆ, ಹಲಸು, ಕರಡಿ, ರಂಜೆ, ಸ್ಟೆತೋಡಿಯಾ, ನೀರ್‌ನಂದಿ, ಅರಶಿನ ಬಿದಿರು, ಹೊಳೆ ಮತ್ತಿ, ಶ್ರೀಗಂಧ ಮತ್ತು ತೇಗ.

ಇದಕ್ಕಾಗಿ ಮೀಸಲಿಟ್ಟ ಹಣ ರೂ. 40.12 ಲಕ್ಷ.

ವೀರಾಜಪೇಟೆ ತಾಲ್ಲೂಕು : ಹಲಸು, ಪಾಲಿ, ಸಂಪಿಗೆ, ನೆಲ್ಲಿ, ಹೆಚ್. ದಾಸವಾಳ, ನಂದಿ, ಇರ್ಪು, ಪಣಪುಳಿ, ಹೆಬ್ಬಲಸು, ಬೆತ್ತ, ನೀರುನಂದಿ, ತಾರಿ, ಹೊಳೆಮತ್ತಿ, ಬಿದಿರು, ಕರಡಿ, ಹೊನ್ನೆ, ಬಳಂಜಿ, ಕುಳಿರ್‌ಮಾವು, ಮತ್ತಿ, ಹೊಂಗೆ, ಹೆಬ್ಬೇವು.

(ಈ) ಗಿಡ ನೆಡುವ ಕಾರ್ಯ ಜೂನ್–2014 ರಿಂದ ಪ್ರಾರಂಭಗೊಂಡಿದ್ದು, ಆಗಸ್ 2014ಕ್ಕೆ ಪೂರ್ಣಗೊಳ್ಳುತ್ತದೆ. ಇನ್ನುಳಿದಂತೆ ಪೋಷಣಾ ಕಾರ್ಯವು ಮಾರ್ಚ್ 2015ರ ಅಂತ್ಯದ ವರೆಗೆ ಇರುತ್ತದೆ.

ಕಾಡಾನೆ ದಾಳಿಗೆ ಒಳಗಾದವರಿಗೆ ಪರಿಹಾರ ನೀಡುವುದು

8(03) ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ) :– ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2013–14ನೇ ಸಾಲಿನಲ್ಲಿ ಕಾಡಾನೆ ದಾಳಿಯಿಂದ ಕೊಡಗು ಜಿಲ್ಲೆಯಲ್ಲಿ ಮೃತಪಟ್ಟವರ ಮತ್ತು ಗಾಯಗೊಂಡವರ ಸಂಖ್ಯೆ ಎಷ್ಟು ; (ಪೂರ್ಣ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು)

(ಆ) ಗಾಯಗೊಂಡ ಹಾಗೂ ಮೃತಪಟ್ಟ ಎಷ್ಟು ಜನರಿಗೆ ಪರಿಹಾರ ಕೊಡಲು ಬಾಕಿಯಿದೆ ; (ಪ್ರತ್ಯೇಕ ವಿವರ ನೀಡುವುದು)

(ಇ) ಕಾಡಾನೆಗಳ ದಾಳಿಯಿಂದ ಎಷ್ಟು ಪ್ರಮಾಣದ ಬೆಳೆ ಫಸಲು ನಷ್ಟವಾಗಿದೆ ; (ಪ್ರತ್ಯೇಕವಾಗಿ ಪೂರ್ಣ ವಿವರಗಳನ್ನು ನೀಡುವುದು)

(ಈ) 2012–13ನೇ ಸಾಲಿನಲ್ಲಿ ಇನ್ನೂ ಎಷ್ಟು ಜನರಿಗೆ ಫಸಲು ನಷ್ಟವನ್ನು ಕೊಡಲು ಬಾಕಿ ಇದೆ ;

(ಉ) ಹಾಗಿದ್ದಲ್ಲಿ, ಯಾವಾಗ ನೀಡಲಾಗುವುದು; ವಿಳಂಬವಾಗಲು ಕಾರಣಗಳೇನು ? (ವಿವರಗಳನ್ನು ನೀಡುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :–

(ಅ) ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿ ಕಾಡಾನೆ ದಾಳಿಯಿಂದ ಮೃತ ಪಟ್ಟವರ ಮತ್ತು ಗಾಯಗೊಂಡವರ ವಿವರ ಈ ಕೆಳಗಿನಂತಿದೆ:–

ವಿಭಾಗ	ಕಾಡಾನೆ ದಾಳಿಯಿಂದ ಮೃತಪಟ್ಟವರ ಸಂಖ್ಯೆ	ಗಾಯ ಗೊಂಡದವರ ಸಂಖ್ಯೆ
ಮಡಿಕೇರಿ	3 ಜನ	4 ಜನ
ವಿರಾಜಪೇಟೆ	3 ಜನ	12 ಜನ
ಮಡೀಕೇರಿ (ವನ್ಯಜೀವಿ)	1 ಜನ	01 ಜನ
ಒಟ್ಟು	7 ಜನ	17 ಜನ

(ಆ) ಮೃತಪಟ್ಟ ಪ್ರಕರಣಗಳಿಗೆ ಪರಿಹಾರ ಕೊಡಲು ಯಾವುದೂ ಬಾಕಿ ಇರುವುದಿಲ್ಲ, ಆದರೆ ವಿರಾಜಪೇಟೆ ವಿಭಾಗದಲ್ಲಿ ಗಾಯಗೊಂಡಿರುವ 3 ಪ್ರಕರಣಗಳಿಗೆ ಪಾವತಿಸಲು ಬಾಕಿಯಿರುತ್ತದೆ.

(ಇ) ಕೊಡಗು ವೃತ್ತದ ವ್ಯಾಪ್ತಿಯಲ್ಲಿ ಕಾಡಾನೆ ದಾಳಿಯಿಂದ ಬೆಳೆ/ಫಸಲು ನಷ್ಟವಾದ ಪ್ರಕರಣಗಳಿಗೆ ಈ ಕೆಳಗಿನಂತೆ ಧಯಾತ್ಮಕ ಧನ ಪಾವತಿಸಿರುವ ವಿವರ

ವಿಭಾಗ	ವರ್ಷ	ಪ್ರಕರಣ	ಪಾವತಿಸಿದ ಮೊತ್ತ (ಲಕ್ಷಗಳಲ್ಲಿ)
ಮಡಿಕೇರಿ	2012–13	535	19.539
ವಿರಾಜಪೇಟೆ		1367	64.630
ವನ್ಯಜೀವಿ ಮಡಿಕೇರಿ		1239	32.327
ಒಟ್ಟು		**3141**	**116.496**
ಮಡಿಕೇರಿ	2013–14	601	19.249
ವಿರಾಜಪೇಟೆ		1388	68.41
ವನ್ಯಜೀವಿ ಮಡಿಕೇರಿ		693	24.372
ಒಟ್ಟು		**2682**	**112.031**

(ಈ) 2012–13ನೇ ಸಾಲಿನಲ್ಲಿ ಫಸಲು ನಷ್ಟದ ಯಾವುದೇ ಪ್ರಕರಣ ಬಾಕಿ ಇರುವುದಿಲ್ಲ.

(ಉ) ಅನ್ವಯಿಸುವುದಿಲ್ಲ.